ಜಿಲ್ಲಾ ಕಾರಾಗೃಹದಲ್ಲಿ ಟೆಲಿ-ಮಾನಸ್ ಸಹಾಯವಾಣಿ ಕೇಂದ್ರ ,ಜೂಟ್ ಬ್ಯಾಗ್ ತಯಾರಿಕಾ ತರಬೇತಿ ಕಾರ್ಯಾಗಾರ ಉದ್ಘಾಟನೆ

ಕೆಟ್ಟ ಆಲೋಚನೆ ಬಿಟ್ಟು ಉತ್ತಮ ಜೀವನ ರೂಪಿಸಿಕೊಳ್ಳಿ: ಶಶಿ

ಸಂ.ಕಸಮಾಚಾರ, ರಾಮನಗರ

ಮನುಷ್ಯನಿಂದ ಕೆಲವು ಸಂದರ್ಭಗಳಲ್ಲಿ ಕೈಮೀರಿದ ತಪ್ಪುಗಳಾಗಿ ಬಿಡುತ್ತದೆ. ಆದರೆ ಆ ತಪ್ಪುಗಳಿಂದ ಪಾಠ ಕಲಿತು, ಕೆಟ್ಟ ಆಲೋಚನೆಗಳನ್ನು ಮೆಟ್ಟಿ ನಿಂತು ಉತ್ತಮ ಜೀವನ ರೂಪಿಸಿಕೊಳ್ಳಬೇಕು. ಕಾರಾಗೃಹದ ನಾಲ್ಕು ಗೋಡೆಗಳ ಮಧ್ಯ ನಡೆಸುವ ಜೀವನವು ಸ್ವತಂತ್ರ ಬದುಕಿನ ಮಹತ್ವವನ್ನು ತಿಳಿಸಿಕೊಡುತ್ತದೆ ಎಂದು ನಗರಸಭೆ ಅಧ್ಯಕ್ಷ ಕೆ. ಶೇಷಾದ್ರಿ ಹೇಳಿದರು.

ನಗರದ ಜಿಲ್ಲಾ ಕಾರಾಗೃಹದಲ್ಲಿ ಜಿಲ್ಲಾಡಳಿತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ವಿಭಾಗ, ರಾಮನಗರ ನಗರಸಭೆ ಹಾಗೂ ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಟೆಲಿ-ಮಾನಸ್ ಸಹಾಯವಾಣಿ ಕೇಂದ್ರ ಮತ್ತು ಜೂಟ್ ಬ್ಯಾಗ್ ತಯಾರಿಕಾ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.



ನಗರದ ಜಿಲ್ಲಾ ಕಾರಾಗೃಹದಲ್ಲಿ ಟೆಲಿ-ಮಾನಸ್ ಸಹಾಯವಾಣಿ ಕೇಂದ್ರ ಮತ್ತು ಜೂಟ್ ಬ್ಯಾಗ್ ತಯಾರಿಕಾ ತರಬೇತಿ ಕಾರ್ಯಾಗಾರವನ್ನು ನಗರಸಭೆ ಅಧ್ಯಕ್ಷ ಕೆ. ಶೇಷಾದ್ರಿ ಉದ್ಘಾಟಿಸಿದರು. ಈ ವೇಳೆ ಪುಷ್ಪಲತಾ ಸೇರಿದಂತೆ ಹಲವರಿದ್ದರು.

ತಪ್ಪು ಮಾಡಿದವರು ಶಿಕ್ಷೆ ಅನುಭವಿಸಿದ ನಂತರ ತಮ್ಮ ಭವಿಷ್ಯವನ್ನು ಉತ್ತಮವಾಗಿ ರೂಪಿಸಿಕೊಳ್ಳಬೇಕು. ಸಮಾಜದಲ್ಲಿ ಘನತೆಯಿಂದ ಬದುಕಲು ನಿರ್ಧರಿಸಬೇಕು. ಒಂಟಿತನ, ದುಃಖ ಹಾಗೂ ಮಾನಸಿಕ ಒತ್ತಡದಿಂದ ಬಳಲುವವರೊಂದಿಗೆ ಸಮಾಧಾನದಿಂದ ವರ್ತಿಸಿ, ಅವರು ಉತ್ತಮ ಜೀವನದತ್ತ ಸಾಗಲು ಮಾರ್ಗದರ್ಶನ ನೀಡಬೇಕು. ಕಾರಾಗೃಹದಲ್ಲಿ ಒದಗಿಸಿರುವ ಗ್ರಂಥಾಲಯ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ಜ್ಞಾನ ಮತ್ತು ಕೌಶಲ್ಯವನ್ನು ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಜಿಲ್ಲಾ ಕಾರಾಗೃಹದ ಅಧೀಕ್ಷಕರಾದ ಪ್ರೀತಿ ಆರ್. ಹಾಗೂ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮಾಧಿಕಾರಿ ಡಾ. ಕುಮಾರ್ ಕೆ. ಮಾತನಾಡಿದರು. ಟೆಲಿ ಮನಸ್ ಮಾನಸಿಕ ಆರೋಗ್ಯ ಸಹಾಯವಾಣಿ ದೂರವಾಣಿ ಕೇಂದ್ರವನ್ನು ಸ್ಥಾಪಿಸಲು ಸಂಪೂರ್ಣ ಸಹಕಾರ ನೀಡಿದ ಮನೋವೈದ್ಯಕೀಯ ಸಮಾಜ ಕಾರ್ಯಕರ್ತೆ ಪದ್ಮರೇಖಾ. ಎಸ್ ರವರನ್ನು ಕಾರಾಗೃಹ ಇಲಾಖೆಯ ಅಧಿಕಾರಿಗಳು ಅಭಿನಂದಿಸಿದರು.

ಬಂಧಿಸಿಗಳ ಮಾನಸಿಕ ಹಾಗೂ ದೈಹಿಕ ಆರೋಗ್ಯದ ಬಗ್ಗೆ ವಿಶೇಷ ಕಾಳಜಿ ವಹಿಸುತ್ತಿರುವ ಕಾರಾಗೃಹದ ವಾರ್ಡನ್ ನಾಗರಾಜು ಶಿವರುದ್ರಣ್ಣನವರನ್ನು ರೋಟರಿ ಸಿಲ್ಕ್ ಸಿಟಿ ರಾಮನಗರ ಹಾಗೂ ಆರೋಗ್ಯ ಇಲಾಖೆಯ ಸಹಯೋಗದಲ್ಲಿ ಗೌರವಿಸಿ ಅಭಿನಂದಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕೌಶಲ್ಯ ಅಭಿವೃದ್ಧಿ ಅಧಿಕಾರಿ ಪುಷ್ಪಲತಾ ಎನ್.ಎಸ್, ಸುನೋದಯ ಕೌಶಲ್ಯ ತರಬೇತಿ ಕೇಂದ್ರ ಅಧ್ಯಕ್ಷ ಮಹಾದೇವು ಮಲ್ಲಂಗೆರೆ, ಸ್ನಾತಕೋತರ ಕೇಂದ್ರ ಉಪನ್ಯಾಸಕ ಪ್ರದೀಪ್ ಕುಮಾರ್ ಎಂ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು, ಮತ್ತಿತರರು ಇದ್ದರು

ವಾಯು ಮಾಲಿನ್ಯ ನಿಯಂತ್ರಣ ಮಾಸಾಚರಣೆ

ಸಂ.ಕ.ಸಮಾಚಾರ, ದೊಮ್ಮಸಂದ್ರ

ಚಂದಾಪುರದ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ವಾಯು ಮಾಲಿನ್ಯ ನಿಯಂತ್ರಣ ಮಾಸಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ವಿವಿಧ ಕಾರ್ಯಗಳಿಗೆ ಆಗಮಿಸಿದ್ದ ಸಾರ್ವಜನಿಕರು, ವಾಹನ ಮಾಲೀಕರು, ಚಾಲಕರಿಗೆ ವಾಯುಮಾಲಿನ್ಯದ ದುಷ್ಪರಿಣಾಮಗಳ ಬಗ್ಗೆ ಅಧಿಕಾರಿಗಳು ಮನವರಿಕೆ ಮಾಡಿಕೊಟ್ಟರು.

ಪ್ರಾದೇಶಿಕ ಸಾರಿಗೆ ಅಧಿಕಾರಿ ಸಿ.ಎಸ್.ಪ್ರಮುತೇಶ್ ಕಾರ್ಯಕ್ರಮ ಉದ್ಘಾಟಿಸಿ, ಸಮಯಕ್ಕೆ ಸರಿಯಾಗಿ ಮಾಲಿನ್ಯ ತಪಾಸಣೆ ಮಾಡಿಸಬೇಕು. ಎಂಜಿನ್ ಆಯಿಲ್, ಏರ್ ಫಿಲ್ಟರ್ ಬದಲಿಸಬೇಕು ಎಂದು ಸಲಹೆ



ನೀಡಿದರು. ಪೆಟ್ರೋಲ್, ಡೀಸೆಲ್ ಬದಲು ಎಲೆಕ್ಟ್ರಿಕ್ ವಾಹನಗಳಿಗೆ ಹೆಚ್ಚು ಒತ್ತು ನೀಡಬೇಕು. ಇದು ಭವಿಷ್ಯದ ದಾರಿ ಎಂದು ತಿಳಿಸಿದರು.

ಗಂಗಾರಾಮ್ ನಾಯ್ಕ್ ಮಾತನಾಡಿ, ವಾಯುಮಾಲಿನ್ಯದಿಂದ ಮನುಷ್ಯನ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ, ಶ್ವಾಸಕೋಶದ ತೊಂದರೆ, ಕಣ್ಣಿನ ಉರಿ, ಅಸ್ತಮಾ ಹೆಚ್ಚಾಗುತ್ತದೆ. ಪ್ರತಿಯೊಬ್ಬರು ತಮ್ಮ ವಾಹನಗಳನ್ನು ಸರಿಯಾಗಿ ನಿರ್ವಹಣೆ ಮಾಡಬೇಕು ಎಂದು ತಿಳಿಸಿದರು. ಮೋಟಾರು ವಾಹನ ನಿರೀಕ್ಷಕರಾದ ಚೇತನಾ, ಶಂಭುಶೇಖರ್, ಗೋಪಾಲಕೃಷ್ಣ ಉಪಸ್ಥಿತರಿದ್ದರು.

ರಕ್ತದಾನ, ಆರೋಗ್ಯ ತಪಾಸಣಾ ಶಿಬಿರ

ಸಂ.ಕ.ಸಮಾಚಾರ, ದೇವನಹಳ್ಳಿ

ಆರೋಗ್ಯವಂತ ಯುವಕರು ಪ್ರತಿ ಆರು ತಿಂಗಳಿಗೊಮ್ಮೆ ರಕ್ತದಾನ ಮಾಡುವುದರಿಂದ ಅನೇಕ ರೋಗಿಗಳಿಗೆ ಅನುಕೂಲವಾಗಲಿದೆ ಎಂದು ದೇವನಹಳ್ಳಿ ಲಯನ್ಸ್ ಸಂಸ್ಥೆಯ ಅಧ್ಯಕ್ಷ ನರಸಿಂಹಮೂರ್ತಿ ತಿಳಿಸಿದರು.



ದೇವನಹಳ್ಳಿ ಪಟ್ಟಣದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಾನಸ ಆಸ್ಪತ್ರೆ ಹಾಗೂ ಲಯನ್ಸ್ ಬ್ಲಡ್ ಬ್ಯಾಂಕ್ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರ ಹಾಗೂ ಆರೋಗ್ಯ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿ, ಒಬ್ಬ ವ್ಯಕ್ತಿ ರಕ್ತದಾನ ಮಾಡುವುದರಿಂದ ಇಬ್ಬರ ಪ್ರಾಣ ಉಳಿಸಬಹುದು. ಇತ್ತೀಚೆಗೆ ರಸ್ತೆ ಅಪಘಾತಗಳು ಹೆಚ್ಚುತ್ತಿದ್ದು, ಅಂತವರಿಗೆ ತುರ್ತು ರಕ್ತದ ಅವಶ್ಯಕತೆ ಇರುತ್ತದೆ. ಆದ್ದರಿಂದ ಆರೋಗ್ಯವಂತರು ರಕ್ತದಾನ ಮಾಡಿದರೆ ಅಂತವರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದರು.

ಶಿಬಿರದಲ್ಲಿ 34 ಯುನಿಟ್ ರಕ್ತ ಸಂಗ್ರಹವಾಗಿದ್ದು, 140ಕ್ಕೂ ಹೆಚ್ಚು ವಿದ್ಯಾರ್ಥಿಗಳು ಆರೋಗ್ಯ ತಪಾಸಣೆ ಮಾಡಿಸಿಕೊಂಡರು. ಇದೆ ವೇಳೆ ಮಾಜಿ ಶಾಸಕ ಜಿ.ಚಂದ್ರಣ್ಣ, ಸಮಾಜ ಸೇವಕ ಎಲ್.ಎನ್.ಅಂಬರೀಶ್, ಕಾಲೇಜಿನ ಪ್ರಾಂಶುಪಾಲ ಮಂಜಪ್ಪ, ದೀಪಕ್, ಸುಮನ್, ಎಸ್.ಶಂಕರ್, ಎಸ್.ಸತೀಶ್ ಕುಮಾರ್, ಡಿ.ಸುಹಾಸ್, ಸೇರಿದಂತೆ ಲಯನ್ಸ್ ಸಂಸ್ಥೆಯ ಸದಸ್ಯರು, ವೈದ್ಯಕೀಯ ಸಿಬ್ಬಂದಿ ಇದ್ದರು.

ರಾಜ್ಯೋತ್ಸವ ಕೇವಲ ಹಬ್ಬವಲ್ಲ ನಮ್ಮ ಅಸ್ಮಿತೆ: ಇತಿಹಾಸ ತಜ್ಞ ಧರ್ಮೇಂದ್ರ



ಏಕರಾಜಪುರದಲ್ಲಿರುವ ರಿಲಯನ್ಸ್ ಸಿಪಿಸಿ ಸಂಸ್ಥೆಯಲ್ಲಿ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು.

ಸಂ.ಕ. ಸಮಾಚಾರ, ಹೊಸಕೋಟೆ

ತಾಲೂಕಿನ ಏಕರಾಜಪುರದಲ್ಲಿರುವ ಅಂತರಾಷ್ಟ್ರೀಯ ಸಂಸ್ಥೆಯಾದ ರಿಲಯನ್ಸ್ ಸಿಪಿಸಿ ವತಿಯಿಂದ ಸತತ ನಾಲ್ಕನೇ ವರ್ಷವೂ ಕನ್ನಡ ರಾಜ್ಯೋತ್ಸವವನ್ನು ಅತ್ಯಂತ ಸಂಭ್ರಮ, ಸಡಗರ ಹಾಗೂ ವಿಜೃಂಭಣೆಯಿಂದ ಆಚರಿಸಲಾಯಿತು.

ಕಂಪನಿಯ ಆವರಣದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮಕ್ಕೆ ಇತಿಹಾಸಕಾರರು ಹಾಗೂ ಲೇಖಕರಾದ ಧರ್ಮೇಂದ್ರ ಕುಮಾರ್ ಧ್ವಜಾರೋಹಣ ನೆರವೇರಿಸುವ ಮೂಲಕ ಚಾಲನೆ ನೀಡಿದರು. ಇದೇ ಸಂದರ್ಭದಲ್ಲಿ ಪರಿಸರ ಸಂರಕ್ಷಣೆಯ ಮಹತ್ವ ಸಾರುವ ನಿಟ್ಟಿನಲ್ಲಿ ಸಸಿ ನೆಡುವ ಕಾರ್ಯಕ್ರಮವನ್ನೂ ಹಮ್ಮಿಕೊಳ್ಳಲಾಗಿತ್ತು.

ನಂತರ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಧರ್ಮೇಂದ್ರ ಕುಮಾರ್, ಇಂದಿನ ದಿನಗಳಲ್ಲಿ ಖಾಸಗಿ ಕಂಪನಿಗಳಲ್ಲಿ ಹೊರರಾಜ್ಯಗಳ ಸಿಬ್ಬಂದಿ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯನಿರ್ವಹಿಸುತ್ತಿರುವುದು ಸಾಮಾನ್ಯವಾಗಿದೆ. ಆದರೆ ಹೊರರಾಜ್ಯದ ಹಿನ್ನೆಲೆಯುಳ್ಳ ರಿಲಯನ್ಸ್ ಸಂಸ್ಥೆಯು ಕನ್ನಡ ನಾಡು, ನುಡಿ ಹಾಗೂ ಸಂಸ್ಕೃತಿಗೆ ಗೌರವ ಸಲ್ಲಿಸುವ ಉದ್ದೇಶದಿಂದ ಸತತ ನಾಲ್ಕು ವರ್ಷಗಳಿಂದ ಅದ್ದೂರಿಯಾಗಿ ಕನ್ನಡ ರಾಜ್ಯೋತ್ಸವ ಆಚರಿಸುತ್ತಿರುವುದು ನಿಜಕ್ಕೂ ಶ್ಲಾಘನೀಯ. ಇಂತಹ ಕನ್ನಡಪರ ಕಾರ್ಯಕ್ರಮಗಳು ಇತರ ಖಾಸಗಿ ಕಂಪನಿಗಳಿಗೂ ಮಾದರಿಯಾಗಬೇಕು ಎಂದರು.

ಯುವ ಕರ್ನಾಟಕ ವೇದಿಕೆಯ ಚಾಲಕರ ಘಟಕದ ಅಧ್ಯಕ್ಷ ಚಂದನ್ ಗೌಡ ಮಾತನಾಡಿದರು. ಈ ವೇಳೆ ಹಾಸ್ಯ ಕಲಾವಿದರಾದ ಡಿಂಗ್ರಿ ನರೇಶ್, ಚಿಕ್ಕಬಳ್ಳಾಪುರದ ಹಾಸ್ಯ ಕಲಾವಿದ ಮಂಜಣ್ಣ ಹಾಗೂ ರೂಪ ಉಪಸ್ಥಿತರಿದ್ದು, ಕಾರ್ಯಕ್ರಮಕ್ಕೆ ಮೆರುಗು ನೀಡಿದರು. ರಿಲಯನ್ಸ್ ಕಂಪನಿಯ ಸಿಬ್ಬಂದಿ, ಸ್ಥಳೀಯ ಗಣ್ಯರು ಹಾಗೂ ಕನ್ನಡಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ವಕೀಲರ ಸಂರಕ್ಷಣಾ ಕಾಯ್ದೆ ಜಾರಿಗೆ ಆಗ್ರಹಿಸಿ ಮಾಗಡಿಯಲ್ಲಿ ಪ್ರತಿಭಟನೆ



ಸಂ.ಕ. ಸಮಾಚಾರ, ಮಾಗಡಿ

ರಾಜ್ಯಾದ್ಯಂತ ವಕೀಲರ ಮೇಲೆ ದಿನೇ ದಿನೆ ಹೆಚ್ಚುತ್ತಿರುವ ಹಲ್ಲೆ, ಜೀವಬೆದರಿಕೆ ಹಾಗೂ ಕೊಲೆ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ, ಕೇವಲ ಹೆಸರಿಗಷ್ಟೇ ಸೀಮಿತವಾಗಿರುವ ಕಾಯ್ದೆಯ ಬದಲಿಗೆ ಅತ್ಯಂತ ಕಠಿಣ ಹಾಗೂ ಬಲಿಷ್ಠ ವಕೀಲರ ಸಂರಕ್ಷಣಾ ಕಾಯ್ದೆಯನ್ನು ಜಾರಿಗೆ ತರಬೇಕೆಂದು ಒತ್ತಾಯಿಸಿ ಮಾಗಡಿ ತಾಲೂಕು ವಕೀಲರ ಸಂಘದ ವತಿಯಿಂದ ಪ್ರತಿಭಟನೆ ನಡೆಸಿ, ತಹಶೀಲ್ದಾರ್ ಮುಖಾಂತರ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ರಾಜ್ಯ ವಕೀಲರ ಪರಿಷತ್ ಕರೆ ನೀಡಿದ ರಾಜ್ಯವ್ಯಾಪಿ ಪ್ರತಿಭಟನೆಗೆ ಬೆಂಬಲ ಸೂಚಿಸಿ, ಮಾಗಡಿ ಪಟ್ಟಣದ ನ್ಯಾಯಾಲಯದ ಕಲಾಪಗಳನ್ನು ಸಂಪೂರ್ಣವಾಗಿ ಬಹಿಷ್ಕರಿಸಿದ ವಕೀಲರು, ನ್ಯಾಯಾಲಯ ಸಂಕೀರ್ಣದಿಂದ ತಾಲೂಕು ಕಚೇರಿಯವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು. ಇದೇ ವೇಳೆ ಹಿರಿಯ ವಕೀಲ ಎಂ.ನಾಗೇಶ್ ಮಾತನಾಡಿ, ಪ್ರಸ್ತುತ ಇರುವ ಕಾಯ್ದೆಯು ಹಲ್ಲು ಕಿತ್ತ ಹಾವಿನಂತಿದ್ದು, ಯಾವುದೇ ಬಲವಿಲ್ಲದಂತಾಗಿದೆ. ಕಾಯ್ದೆ ರೂಪಿಸಿದ್ದರೂ ಅದು ಕಟ್ಟುನಿಟ್ಟಾಗಿ ಅನುಷ್ಠಾನವಾಗುತ್ತಿಲ್ಲ. ಜನ ಸಾಮಾನ್ಯರಿಗೆ ನ್ಯಾಯ ಕೊಡಿಸಲು ಹಗಲಿರುಳು ಶ್ರಮಿಸುವ ವಕೀಲರಿಗೆ ಮಾತ್ರ ಯಾವುದೇ ಸೂಕ್ತ ರಕ್ಷಣೆ ಇಲ್ಲದಿರುವುದು ಈ ದೇಶದ ದುರಂತ ಎಂದು ಆಕ್ರೋಶ ವ್ಯಕ್ತಪಡಿಸಿದರು. ಉಪಾಧ್ಯಕ್ಷ ರಾಜಯ್ಯ ಮಾತನಾಡಿದರು. ವಕೀಲರಾದ ಎಚ್.ಅನಿಲ್‌ಕುಮಾರ್, ಸಹನಾ ಪಂಡಿತ್, ಎಂ.ಎಚ್.ವಿಜಯ್‌ಕುಮಾರ್, ನಾರಾಯಣಸ್ವಾಮಿ, ಆರ್.ಧನಂಜಯ್ಯ, ಜುಟ್ಟನಹಳ್ಳಿ ಹರೀಶ್, ಜಿ.ಪಾಪಣ್ಣ, ತಿರುಮಲೆ ರವಿ ಸೇರಿ ಹಲವರಿದ್ದರು.

ಹಾಲಿನ ದರ ಏರಿಕೆಗೆ ಖಂಡನೆ

ವಿಜಯಪುರ: ರಾಜ್ಯ ಸರ್ಕಾರ ನಂದಿನಿ ಹಾಲಿನ ದರ ಏರಿಕೆ ಮಾಡಿ ರಾಜ್ಯದ ಜನರಿಗೆ ಹೆಚ್ಚುವರಿ ಆರ್ಥಿಕ ಬರೆ ಎಳೆದಿರುವುದು ಖಂಡನೀಯ ಎಂದು ವಿಜಯಪುರ ಪಟ್ಟಣ ಬಿಜೆಪಿ ಅಧ್ಯಕ್ಷ ವೆಂಕಟೇಶ್ ಪ್ರಭು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸರ್ಕಾರ ಹಾಲಿನ ದರ ಏರಿಕೆ ಮಾಡುವ ಮೂಲಕ ಗ್ರಾಹಕರಿಗೆ ಹೆಚ್ಚುವರಿ ಆರ್ಥಿಕ ಹೊರೆ ಹೊರಿಸಿದೆ. ಇದರಿಂದ ಸಾಮಾನ್ಯ ಜನರಿಗೆ, ಬಡ ಹಾಗೂ ಮಧ್ಯಮ ವರ್ಗದ ಕುಟುಂಬಗಳಿಗೆ ಆರ್ಥಿಕ ತೊಂದರೆಯಾಗಲಿದೆ. ಗ್ರಾಹಕರಿಗೆ 12 ರೂಪಾಯಿಗಳ ಹೆಚ್ಚುವರಿ ಹೊರೆ ವಿಧಿಸಿರುವುದು ಸರಿಯಾದ ಕ್ರಮವಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ರಾಜ್ಯ ಸರ್ಕಾರ ನಂದಿನಿ ಹಾಲಿನ ದರ 8 ರೂ. ಹೆಚ್ಚಿಗೆ ಮಾಡಲಾಗುವುದು ಎಂದು ಸಂಪುಟದಲ್ಲಿ ತೀರ್ಮಾನ ಮಾಡಿದ್ದು, ಆದರೆ ಕೆಎಂಎಫ್‌ನಿಂದ 12ರೂ.ಗಳನ್ನು ಹೆಚ್ಚಿಗೆ ಮಾಡಲಾಗಿದೆ. ಇದು ಗ್ರಾಹಕರಿಗೆ ಮಾಡುತ್ತಿರುವ ಮೋಸ ಹಾಗೂ ಮೊಸರಿನ ದರ ಏರಿಕೆ ಮಾಡುವುದಿಲ್ಲ ಎಂದು ತಿಳಿಸಿರುವ ಸರ್ಕಾರ 1 ಲೀಟರ್ ಮೊಸರಿಗೆ 14 ರೂ.ಗಳನ್ನು ಹೆಚ್ಚಿಗೆ ಮಾಡಿರುವುದು ಯಾವ ನ್ಯಾಯ. ಇದು ಜನಸಾಮಾನ್ಯರಿಗೆ ಸರ್ಕಾರ ಮತ್ತು ಕೆಎಂಎಫ್ ಮಾಡಿರುವ ದ್ರೋಹ ಎಂದು ಕಿಡಿಕಾರಿದರು.

ರಾಜ್ಯ ಸರ್ಕಾರ ಹಾಗೂ ಕೆಎಂಎಫ್ ಗ್ರಾಹಕರ ಹಿತದೃಷ್ಟಿಯಿಂದ ಹಾಲಿನ ದರ ಏರಿಕೆ ನಿರ್ಧಾರವನ್ನು ಮರುಪರಿಶೀಲಿಸಿ, ಏರಿಕೆ ಮಾಡಿರುವ ದರವನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿದರು.

PUBLIC NOTICE

General Public are hereby notified that the undersigned has been instructed to carry out search report to ascertain the marketable title and lawful possession of **SMT. CHIKKATHAYAMMA**, R/o. 86, Ambedkar Colony, T John College Road, Doddakamanahalli, Near Aralikatte Circle, Gottigere (P.O), Bangalore South, Bangalore, Karnataka- 560083, over the Schedule Property, who has offered to sell the same to my client for consideration. Consequently, I have undertaken to carry out search and to scrutinize various documents to ascertain the marketable title and lawful possession of the Owner over the Schedule Property and the search report is in progress. Meanwhile, I have been authorized to issue this Public Notice by the owner calling for objections from persons who may be interested in the Schedule Property or any portion thereof or having any claims against the Schedule Property or opposing sale thereof.

Therefore, any person/s, financial institutions or otherwise having any interest in the Schedule Property or any portion thereof or intending to oppose the sale of the Schedule Property or any portion thereof to third parties, may forward their written objections with supporting documents to the undersigned, within TEN (10) days from the date of publication hereof for scrutiny and consideration. Any objections received thereafter will not be considered and my client would proceed with the completion of the sale subject to title clearance, as if there are no third party claims or interest, and if any, are deemed to have been waived.

SCHEDULE PROPERTY

Agricultural property bearing Sy. No. 8/2, measuring to an extent of 0-26 Guntas situated at Kammanahalli Village, Begur Hobli, Bangalore South Taluk and bounded on: East by: Property belongs to Venaktesh Maddappa, West by: Kere Katte, North by: Property belongs to Shahabuddeen,South byProperty belongs to Ashwathanarayana.

VAISHNAVI .R., Advocate
No.5, Richmond Road, Bengaluru-560 025.

ಕನ್ನಡ ಡೈಜೆಸ್ಟ್
ಕಸ್ತೂರಿ
ತಪ್ಪದೆ ಓದಿ

ನೈಋತ್ಯ ರೈಲ್ವೆ

ಬೆಂಗಳೂರು ವಿಭಾಗದಿಂದ ಪಾರ್ಸೆಲ್ ಸ್ಥಳ, ಪಾರ್ಕಿಂಗ್ & ಜಾಹೀರಾತು ಮತ್ತು ವಿವಿಧ ಗುತ್ತಿಗೆಗಳಿಗಾಗಿ ಇ-ಹರಾಜು

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ದಿನಾಂಕಗಳಂದು ಇ-ಹರಾಜಿಗಾಗಿ ಬಿಡ್ಡರ್‌ಗಳನ್ನು ಆಹ್ವಾನಿಸಿದ್ದಾರೆ:

1. **ಪಾರ್ಕಿಂಗ್:** 11.11.2026, 30.11.2026.
2. **ಜಾಹೀರಾತು:** 16.11.2026, 27.11.2026
3. **ಪಾರ್ಸೆಲ್‌ಗಳು:** 11.11.2026, 12.11.2026, 26.11.2026
4. **ಪಾಪತಿ ಮತ್ತು ಬಳಕೆ:** 09.11.2026, 11.11.2026, 12.11.2026, 29.11.2026, 30.11.2026
5. **ಎಟಿಎಂ ಮತ್ತು ವಿವಿಧೋದ್ದೇಶ:** 09.11.2026, 11.11.2026, 12.11.2026, 13.11.2026, 16.11.2026, 17.11.2026, 25.11.2026, 30.11.2026.
6. **ಕ್ಯಾಟರಿಂಗ್ ಮತ್ತು ಎಂಪಿಎಸ್:** 25.11.2026, 26.11.2026, 30.11.2026

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ ಟೆಂಡರಿನ ವಿಶೇಷತೆಗಳಿಗೆ ಯಾವುದಾದರೂ ವಿಷಯದ ಇಲ್ಲವೆ ಮೆಸ್ಟೆಜ್‌ಅನ್ನು ಸೂಚಿಸುತ್ತಿರಿ ಧನ್ಯವಾದಗಳು

ವರಿಷ್ಠ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು/ ಬೆಂಗಳೂರು
PUB/585/AAD/PRB/SWR/2026-27

ಸುಲಭ ಟಿಕೆಟ್ ಬುಕಿಂಗ್, **PNR** ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ **RailOne** ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | SWRAILWAYHQ | sw_railways

Can Fin Homes Ltd
(Sponsor: CANARA BANK)
HOME LOANS • DEPOSITS

ಕ್ಯಾನ್ ಫಿನ್ ಹೋಮ್ಸ್ ಲಿ.,
ನಂ. 14, ಕೃಷ್ಣ ಟವರ್ಸ್, ಹೊರ ವರ್ತುಲ ರಸ್ತೆ ಕ್ರಾಸ್, (ಸರ್ವಿಸ್ ರಸ್ತೆ), ಮಾರತ್‌ಹಳ್ಳಿ, ಬೆಂಗಳೂರು – 560 037
ಫೋನ್: 080-25401332/ 080-43942422
ಮೊಬೈಲ್:7625079147
e-mail ID : marathahalli@canfinhomes.com
CIN: L85110KA1987PLC008699

ನೂರತ್‌ಹಳ್ಳಿ ಶಾಖೆ

ಡಿಮ್ಯಾಂಡ್ ನೋಟೀಸ್

ಸೆಕ್ಯೂರಿಟೈಸೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ (ಸಂ. 54ರ 2002) ಪ್ರಕರಣ 13(2)ರ ಅನ್ವಯ ನೋಟೀಸು

ಇವರಿಗೆ,

1. **ಸಾಲಗಾರರು :** ಶ್ರೀ ಆಂಜನೇಯಲು S/o.ಶ್ರೀ ಸರ್ಜು ವಯಸ್ಸು 64 ವರ್ಷ,
2. **ಸಹ ಸಾಲಗಾರರು** ಶ್ರೀಮತಿ ಕಮುಲಮ್ಮ W/o. ಶ್ರೀ ಆಂಜನೇಯುಲು ,ವಯಸ್ಸ